**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 121/2024 |
| ಸಿ.ಡಬ್ಲ್ಯೂ | : 01 |
| ಪಿ.ಡಬ್ಲ್ಯೂ | : 01 |
| ಸಾಕ್ಷಿಯ ಹೆಸರು | : ಶಿವರಡ್ಡಿ ಬಸವರಡ್ಡಿ ರಿತ್ತಿ |
| ವಯಸ್ಸು | : 46 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಇಬ್ರಾಹಿಂಪೂರ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 20.02.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-6 ರಿಂದ 11 ರವರ ಪರಿಚಯವಿದೆ.

ದಿನಾಂಕಃ 14-03-2023 ರಂದು ನಾನು ನಮ್ಮ ಜಮೀನಿನಲ್ಲಿದ್ದಾಗ ಒಂದು ಎಮ್ಮೆ ನಮ್ಮ ಜಮೀನಿನಲ್ಲಿ ಮೇಯದು ನಮಗೆ ನಷ್ಟು ಉಂಟು ಮಾಡಿರುತ್ತದೆ. ನಂತರ ನಾನು ಸದರಿ ಎಮ್ಮೆಯನ್ನು ನಮ್ಮ ಜಮೀನಿನಲ್ಲಿ ಕಟ್ಟಿಕೊಂಡಿರುತ್ತೇನೆ. ಒಂದು-ಒಂದೂವರೆ ತಿಂಗಳ ನಂತರ 1 ನೇ ಆರೋಪಿ ಮತ್ತು ಆತನ ಮಗ ಬಂದು ಸದರಿ ಎಮ್ಮೆ ನಮಗ ಸಂಬಂಧಿಸಿದ್ದು ಎಂದು ತಿಳಿಸಿರುತ್ತಾರೆ. ನಂತರ ನಾನು ಹಾಗೂ ಚಾಸಾ-6 ರವರು ಸದರಿಯವರಿಗೆ ಊರಿನಲ್ಲಿ 4 ಜನರನ್ನು ಕರೆದುಕೊಂಡು ಬಂದು ಸದರಿ ಎಮ್ಮೆ ತಮಗೆ ಸಂಬಂಧಿಸಿದ್ದು ಎಂದು ತಿಳಿಸಿದಲ್ಲಿ ಅದನ್ನು ತೆಗೆದುಕೊಂಡು ಹೋಗುವಂತೆ ಹೇಳಿರುತ್ತೇವೆ. ಸದರಿ ದಿನ ಬೆ.10.30 ಗಂಟೆ ಯ ಸುಮಾರು ಚಾಸಾ-6 ರವರು ಆನಂದ ಮಳಗಿಯವರ ಜಮೀನಿನಲ್ಲಿ ದನ ಮೇಯಿಸುತ್ತಿದ್ದಾಗ ಆರೋಪಿತರೆಲ್ಲರೂ ಸದರಿಯವರಿಗೆ ಹೊಡೆಬಡೆ ಮಾಡಿ, ಅವಾಚ್ಯವಾಗಿ ಬೈದು ಎಮ್ಮೆಯನ್ನು ತೆಗೆದುಕೊಂಡು

ಹೋಗಿಸರುತ್ತಾರೆ. ಸದರಿ ವೇಳೆಗೆ ನಾನು ನನ್ನ ಜಮೀನಿನಲ್ಲಿದ್ದೆ. ಸದರಿಯವರ ಕೃತ್ಯದಿಂದ ಚಾಸಾ-6 ರವರ ತೆಲೆಗೆ ಕಾಲಿಗೆ ರಕ್ತಗಾಯಗಳಾಗಿದ್ದು ಹಾಗೂ ಒಳಪೆಟ್ಟು ಆಗಿರುತ್ತದೆ. ನಂತರ ಸದರಿಯವರನ್ನು ನವಲಗುಂದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ ಸದರಿಯವನನ್ನು ಹುಬ್ಬಳ್ಳಿಯ ಶಾಕುಂತಲಾ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ 2 ದಿನಗಳ ಬಳಿಕ ನಾನು ಆರೋಪಿತರ ವಿರುದ್ದ ನವಲಗುಂದ ಪೋಲಿಸ ಠಾಣೆಗೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ನಂತರ ಪೋಲೀಸರು ದಿನಾಂಕಃ 16-03-2023 ರಂದು ಗುನ್ಹಾ ಜಾಗೆಯ ಪಂಚನಾಮೆಯನ್ನು ಮಾಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಹಲ್ಲೆಗೆ ಉಪಯೋಗಿಸಿದ ಎರಡು ಬಡಿಗೆಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ನಂತರ ರಕ್ತಮಯವಾಗಿದ್ದ ಬಟ್ಟೆಗಳನ್ನು ಪೋಲೀಸ ಠಾಣೆಗೆ ನೀಡಿದ್ದು, ಪೋಲೀಸರು ಪಂಚರ ಸಮಕ್ಷಮ ಸದರಿ ಬಟ್ಟೆಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮ.01.00 ಗಂಟೆಯ ಸುಮಾರು ಮಾಡಿರುತ್ತಾರೆ.

ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು **ನಿಪಿ-2** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಭಾವಚಿತ್ರವನ್ನು **ನಿಪಿ-3** ಎಂದು ಗುರುತಿಸಲಾಯಿತು. ಬಟ್ಟೆ ಜಪ್ತಿ ಪಂಚನಾಮೆಯನ್ನು **ನಿಪಿ-4** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು **ನಿಪಿ-5** ರಿಂದ **ನಿಪಿ-7** ಎಂದು ಗುರುತಿಸಲಾಯಿತು. ಸಾಕ್ಷಿಯು ಹಲ್ಲೆಗೆ ಉಪಯೋಗಿಸಿದ 2 ಬಡಿಗೆಗೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ಮುದ್ದೆ ಮಾಲು 1** ಮತ್ತು **2** ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಮಕ್ಷಮ ಜಪ್ತಿ ಮಾಡಿದ ರಕ್ತಮಯವಾದ ಬಟ್ಟೆಗಳನ್ನು ಗುರುತಿಸಿದ್ದು, ಅವುಗಳನ್ನು **ಮುದ್ದೆ ಮಾಲು 3** ರಿಂದ **5** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕಃ 14-06-2023 ರಂದು ಬೆ.11.00 ಗಂಟೆಯ ಸುಮಾರು ಸದರಿ ಘಟನೆಯಾಗಿರುತ್ತದೆ ಎಂದರೆ ಸರಿ. ದಿನಾಂಕಃ 15-06-2023 ರಂದು ಬೆ.10.00 ರಿಂದ 11.00 ಗಂಟೆಯವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನಾ ಸ್ಥಳದ ಪಂಚನಾಮೆಯನ್ನು ನಾನು ತೋರಿಸಿದ ಮೇರೆಗೆ ಪೂರೈಸಿ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ದಿನ ಬೆ.01.00 ರಿಂದ 02.00 ಗಂಟೆಯವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-6 ರವರಿಗೆ ಸಂಬಂಧಿಸಿದ ರಕ್ತಮಯವಾದ 1 ಬಿಳಿ ಬಣ್ಣದ ಅಂಗಿ, ರಕ್ತಮಯವಾದ ಒಂದು ಬಿಳಿ ಬಣ್ಣದ ಒಳಅಂಗಿ ಹಾಗೂ ರಕ್ತಮಯವಾದ ಒಂದು ಬಿಳಿ ಬಣ್ಣದ ಟಾವೆಲ್ ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ದಿನಾಂಕಃ 15-06-2023 ರಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ನಾನು ನೀಡಿದ ಪಿರ್ಯಾದಿಯಲ್ಲಿ 6 ಜನ ಆರೋಪಿತರು ಎಂದು ತೋರಿಸಿದ್ದು, ಆದರೆ 4 ಜನ ಸೇರಿ ಹಲ್ಲೆ ಮಾಡಿರುತ್ತಾರೆ ಹಾಗೂ ಪಿರ್ಯಾದಿಯಲ್ಲಿ ನಜರಚೂಕಿನಿಂದ ತಪ್ಪಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-8** ಎಂದು ಗುರುತಿಸಲಾಯಿತು. ನಿಪಿ-1 ನ್ನು ನಾನು ಹೇಳಿದ ಮೇರೆಗೆ ಪಾಂಡುರಡ್ಡಿ ಕುರಹಟ್ಟಿಯವರು ಬರೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದಃ**

ನನ್ನ ಜಮೀನಿನಲ್ಲಿ ಒಂದೂವರೆ ತಿಂಗಳಿನಿಂದ ಬೇರೆಯುವರಿಗೆ ಸಂಬಂಧಿಸಿದ ಎಮ್ಮೆ ಮೇಯ್ಯದು ನಷ್ಟ ಉಂಟು ಮಾಡಿದ್ದರ ಬಗ್ಗೆ ಪೋಲೀಸ ಠಾಣೆಗಾಗಲೀ ಅಥವಾ ಪಂಚಾಯತಗಾಗಲೀ ದೂರು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದರ ಮಾಲೀಕರು ಬರುತ್ತಾರೆ ಎನ್ನುವ ಮಾನವೀಯತೆ ದೃಷ್ಟಿಯಿಂದ ದೂರು ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಒಂದೂವರೆ ತಿಂಗಳ ನಂತರ ಅಲ್ಲಿ ದನ ಮೇಯಿಸಲು ಬರುತ್ತೀರುವವರಿಗೆ ಸದರಿ ವಿಷಯ ತಿಳಿಸಿದ್ದು ಆದರೆ ಪತ್ರಿಕಾ ಪ್ರಕಟಣೆ ಮಾಡಿರುವುದಿಲ್ಲ. ಸದರಿ ಅಂಶವನ್ನು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ಘಟನೆ ನಡೆದ ದಿನ ನಾನು ನನ್ನ ತೋಟದಲ್ಲಿದ್ದೆ. ನನ್ನ ತೋಟದಿಂದ ಆನಂದ ಮಳಗಿರವರ ಜಮೀನು 1

ಕಿ. ಮೀ. ಅಂತರದಲ್ಲಿದೆ. ನಾನು ಸದರಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸದರಿ ಘಟನೆ ನಡೆದ ಬಗ್ಗೆ ನನಗೆ ಚಾಸಾ-6 ರವರು ತಿಳಿಸಿರುತ್ತಾರೆ. ಚಾಸಾ-6 ರವರನ್ನು ಚಾಸಾ-7 ಮತ್ತು 8 ರವರು ಕರೆದುಕೊಂಡು ನಮ್ಮ ಜಮೀನಿಗೆ ಬಂದಿರುತ್ತಾರೆ. ಚಾಸಾ-8 ರವರು ಚಾಸಾ-6 ರವರ ಮಗ ಎಂದರೆ ಸರಿಯಲ್ಲ. ಚಾಸಾ-8 ರವರು ಚಾಸಾ-6 ರವರ ಜಮೀನಿನ ಪಕ್ಕದ ಜಮೀನಿನವರು. ನನ್ನ ದೂರಿನಲ್ಲಿ ಚಾಸಾ-7 ಮತ್ತು ಚಾಸಾ-8 ರವರ ಜಮೀನು ಚಾಸಾ-6 ರವರ ಜಮೀನಿನ ಪಕ್ಕದಲ್ಲಿವೆ ಎಂದು ಬರೆಸಿರುತ್ತೇನೆ. ಸದರಿ ವಿಷಯವನ್ನು ದೂರಿನಲ್ಲಿ ಬರೆಸದಿದ್ದರೂ ಸಹ ಬರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಜಮೀನು ಶಲವಡಿ ರಸ್ತೆಗೆ ಬರುತ್ತದೆ. ನನ್ನ ಜಮೀನು ಸದರಿ ರಸ್ತೆ ದಾಟಿದ ನಂತರ ಬರುತ್ತದೆ. ಆನಂದ ಮಳಗಿಯವರ ಜಮೀನಿನಿಂದ ನವಲಗುಂದ ಪೊಲೀಸ ಠಾಣೆ 10 ಕಿ. ಮೀ. ಅಂತರದಲ್ಲಿದೆ. ಚಾಸಾ-6 ರವರನ್ನು ದಿನಾಂಕಃ 14 ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪೋಲೀಸರು ಚಾಸಾ-6 ರವರನ್ನು ಆಸ್ಪತ್ರೆಯಲ್ಲಿ ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರು ಪ್ರಜ್ಞಾಹೀನರು ಆಗಿದ್ದರು ಎಂದು ನುಡಿದಿರುತ್ತಾರೆ. ಚಾಸಾ-6 ರವರನ್ನು ನಮ್ಮ ಜಮೀನಿಗೆ ಕರೆದುಕೊಂಡ ಬಂದಾಗ ಸದರಿಯವರಿಗೆ ಪ್ರಜ್ಞೆ ಇತ್ತು. ಸದರಿ ವೇಳೆಗೆ ಚಾಸಾ-6 ರವರು ಘಟನೆಯ ಬಗ್ಗೆ ನನಗೆ ವಿವರಿಸುವಷ್ಟು ಸಾಮರ್ಥ್ಯವಿತ್ತು.

2. ಚಾಸಾ-6 ರವರ ಸಹೋದರರೆಂದರೆ ಚೆನ್ನರಡ್ಡಿ, ಮಲ್ಲರಡ್ಡಿ, ಧರ್ಮರಡ್ಡಿ ಹಾಗೂ ರಾಮರಡ್ಡಿ ಎಂದರೆ ಸರಿ. ಸದರಿಯವರ ಪೈಕಿ ಮಲ್ಲರಡ್ಡಿ ಯವರು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರಾಗಿದ್ದು, ಧರ್ಮರಡ್ಡಿಯವರು ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು. ಧರ್ಮರಡ್ಡಿಯವರು ಘಟನೆಯಾಗುವುದಕ್ಕಿಂತ ಮುಂಚೆ ಮೃತಪಟ್ಟಿದ್ದರು ಎಂದು ನುಡಿದಿರುತ್ತಾರೆ. ಚಾಸಾ-6 ಮತ್ತು ಆತನ ಸಹೋದರರಿಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಭಾರತೀಯ ದಂಡ ಸಂಹಿತೆ ಕಲಂ 307 ರ ಅಪರಾಧಕ್ಕೆ ಸಂಬಂಧಿಸಿ ಶಿಕ್ಷಯಾಗಿತ್ತು ಎಂದರೆ ಸರಿ. ಸದರಿ ಶಿಕ್ಷೆ ಪ್ರಕಟವಾದ ನಂತರ ಧರ್ಮರಡ್ಡಿ ಮೃತಪಟ್ಟಿರುತ್ತಾನೆ ಎಂದರೆ ಸರಿ. ಸದರಿಯವರಿಗೆ ಚೆಂದರಿಯವರ ಪ್ರಕರಣಕ್ಕೆ ಸಂಬಂಧಿಸಿ ಸಹ ಭಾರತೀಯ ದಂಡ ಸಂಹಿತೆ ಕಲಂ 307 ರ ಅಪರಾಧಕ್ಕೆ ಸಂಬಂಧಿಸಿ ಶಿಕ್ಷಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

3. ಚಾಸಾ-6 ರವರ ಮಾತುಕೇಳಿ ನಮ್ಮ ಜಮೀನಿಗೆ ಬಂದಿದ್ದ ಎಮ್ಮೆಯನ್ನು ನಾನೇ ಒತ್ತಾಯಪೂರ್ವಕವಾಗಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ಎಮ್ಮೆ ತಮ್ಮದು ಎಂದು ಅದನ್ನು ಬಿಡುವಂತೆ ಕೋರಿಕೊಂಡಿದ್ದಕ್ಕೆ ನಾನೇ ಅವರ ಮೇಲೆ ಹಲ್ಲೆ ಮಾಡಿರುತ್ತೆನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಮತ್ತು 2 ಸಾಮಾನ್ಯವಾಗಿ ಎಲ್ಲಾ ಕಡೆಗೆ ಸಿಗುತ್ತವೆ ಎಂದರೆ ಸರಿ. ಸದರಿ ಮುದ್ದೆ ಮಾಲುಗಳನ್ನು ಉದ್ದೇಶಪೂರ್ವಕವಾಗಿ ಪೋಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಮುದ್ದೆ ಮಾಲು 3 ರಿಂದ 5 ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗುವಂತೆ ರೀತಿಯಲ್ಲಿ ಪಂಚನಾಮೆ ಹಾಗೂ ಬಟ್ಟೆ ಜಪ್ತಿ ಪಂಚನಾಮೆಯನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿಲ್ಲ ಹಾಗೂ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**